# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1476 |
| 2. ಸದಸ್ಯರ ಹೆಸರು | : | ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | : | 18.12.2025. |
| 4. ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಗಳಲ್ಲಿ ಎಲ್ಲಾ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗಿರುತ್ತಿವೆ; (ಇಲಾಖಾವಾರು ವಿವರ ನೀಡುವುದು)</td><td>2025-26 ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಒಟ್ಟು ಒಟ್ಟಾರೆ ತೆರಿಗೆ ಸಂಗ್ರಹ ಗುರಿ 208100 ಕೋಟಿಗಳಿದ್ದು, ನವೆಂಬರ್ 2025ರ ಅಂತ್ಯಕ್ಕೆ, 123278 ಕೋಟಿಗಳು ಸಂಗ್ರಹವಾಗಿರುತ್ತದೆ. ರಾಜ್ಯ ಮಟ್ಟದಲ್ಲಿ ತೆರಿಗೆ ಸಂಗ್ರಹಣೆಯಾಗುವುದರಿಂದ ಜಿಲ್ಲಾವರು ಮಾಹಿತಿ ಲಭ್ಯವಿರುವುದಿಲ್ಲ</td></tr>
<tr><td>ಆ.</td><td>ಸದರಿ ಜಿಲ್ಲೆಗಳಿಗೆ ಗ್ಯಾರಂಟಿ ಯೋಜನೆಗಳಿಗೆ ಪ್ರತಿ ತಿಂಗಳು ಅಗತ್ಯವಿರುವ ಹಣ ಎಷ್ಟು; (ಯೋಜನೆವಾರು ವಿವರ ನೀಡುವುದು)</td><td>ಗ್ಯಾರಂಟಿ ಯೋಜನೆಗಳು ಫಲಾನುಭವಿ ಕೇಂದ್ರಿತ ಯೋಜನೆಗಳಾಗಿದ್ದು, ಫಲಾನುಭವಿಗಳ ಸಂಖ್ಯೆಯ ಆಧಾರದ ಮೇಲೆ ಅನುದಾನ ನೀಡಲಾಗುವುದು. ಆಯವ್ಯಯದಲ್ಲಿ ಎಲ್ಲಾ ಗ್ಯಾರಂಟಿ ಯೋಜನೆಗಳಿಗೆ 51034 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, 30 ನೇ ನವೆಂಬರ್ ಅಂತ್ಯದವರೆಗೂ 26334 ಕೋಟಿ ವೆಚ್ಚವಾಗಿರುತ್ತದೆ(ಸದರಿ ವೆಚ್ಚದಲ್ಲಿ 2025-26 ನೇ ಸಾಲಿನ ಪಾವತಿಗಾಗಿ 2024-25 ನೇ ಸಾಲಿನ ಮಾರ್ಚ್ ಮಾಹೆಯಲ್ಲಿ 5521 ಕೋಟಿಗಳನ್ನು ಇಲಾಖೆಗೆ ವರ್ಗಾಯಿಸಲಾಗಿರುತ್ತದೆ)</td></tr>
<tr><td>ಇ.</td><td>ಗ್ಯಾರಂಟಿ ಯೋಜನೆಗಳನ್ನು ಹೊರತುಪಡಿಸಿ ಇನ್ನಿತರ ಸರ್ಕಾರಿ ವೆಚ್ಚಗಳಿಗೆ ಪ್ರತಿ ತಿಂಗಳು ಅಗತ್ಯವಿರುವ ಹಣ ಎಷ್ಟು;</td><td>ಗ್ಯಾರಂಟಿ ಯೋಜನೆಗಳನ್ನು ಹೊರತುಪಡಿಸಿ ಇನ್ನಿತರೆ ಸರ್ಕಾರಿ ವೆಚ್ಚಗಳಿಗೆ ಅಗತ್ಯವಿರುವ ಅನುದಾನದ ವಿವರಗಳು ಈ ಕೆಳಕಂಡಂತಿವೆ:<br><br>
<table>
<tr><th colspan="2">(ರೂ. ಕೋಟಿಗಳಲ್ಲಿ)</th></tr>
<tr><th>ವಿವರಗಳು</th><th>2025-26</th></tr>
<tr><td>ಆಯವ್ಯಯ ಅಂದಾಜು</td><td>409549.24</td></tr>
<tr><td>ಗ್ಯಾರಂಟಿ ಯೋಜನೆಗಳ ಆಯವ್ಯಯ ಅಂದಾಜು</td><td>51034.00</td></tr>
<tr><td>ಇನ್ನಿತರೆ ಸರ್ಕಾರಿ ವೆಚ್ಚಗಳಿಗೆ ಲಭ್ಯವಿರುವ ಅನುದಾನ</td><td>358515.24</td></tr>
</table>
<br>ಇನ್ನಿತರೆ ಸರ್ಕಾರಿ ವೆಚ್ಚಗಳಲ್ಲಿ ಬದ್ಧ ವೆಚ್ಚಗಳು ಹಾಗೂ ಸರ್ಕಾರವು ಯೋಜನೆಗಳಿಗೆ ಭರಿಸುವ ವೆಚ್ಚವನ್ನು ಒಳಗೊಂಡಿರುತ್ತದೆ.<br><br>ಈ ವೆಚ್ಚಗಳು ಪ್ರತಿ ಮಾಹೆ ವ್ಯತ್ಯಾಸವಾಗುವುದರಿಂದ ಇಂತಿಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.<br><br>ಸರ್ಕಾರ ಯೋಜನೆಗಳಿಗೆ ಬಿಡುಗಡೆ ಮಾಡುವ ಅನುದಾನವು ಅನುದಾನ ಬಳಕೆಯ ಆಧಾರದ ಮೇಲೆ ನಿರ್ಧಾರಿತವಾಗುವುದರಿಂದ ಈ ವೆಚ್ಚವನ್ನು ಪ್ರತಿ ಮಾಹೆಗೆ ಇಂತಿಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.</td></tr>
<tr><td>ಈ.</td><td>ಈ ಮೇಲ್ಕಂಡ ಜಿಲ್ಲೆಗಳಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಕಳೆದ 02 ವರ್ಷಗಳಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಗ್ಯಾರಂಟಿ ಅನುಷ್ಠಾನದಿಂದಾಗಿ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳಿಗೂ ಸಾರ್ವಜನಿಕರು ಪರಿತಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು?</td><td>ಆಯವ್ಯಯದಲ್ಲಿ ಅನುದಾನವನ್ನು ಇಲಾಖಾವಾರು ಹಾಗೂ ಲೆಕ್ಕಶೀರ್ಷಿಕೆವಾರು ಅನುದಾನವನ್ನು ಹಂಚಿಕೆ ಮಾಡಿ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಲ್ಲಿ ನಿಗದಿಪಡಿಸಿದಂತೆ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ. ಆದಕಾರಣ ವಿಧಾನಸಭಾವಾರು ಅನುದಾನ ಬಿಡುಗಡೆ ಜಾರಿಯಲ್ಲಿರುವುದಿಲ್ಲ.</td></tr>
</table>

ರಾಜ್ಯದ ಆರ್ಥಿಕ ಪ್ರಗತಿಯನ್ನು ಕೇಂದ್ರವಾಗಿಟ್ಟುಕೊಂಡು. 2025-26ನೇ ಸಾಲಿನಲ್ಲಿ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ಒದಗಿಸಲಾಗಿರುತ್ತದೆ. ಬಂಡವಾಳ ಯೋಜನೆಗಳಿಗೆ ನೀಡಿರುವ ಒಟ್ಟು ಅನುದಾನವು (Gross) 2024-25ರಲ್ಲಿ ಅಂದಾಜಿಸಿದ್ದ 56,492 ಕೋಟಿ ರೂ.ಗಳಿಂದ 2025-26ನೇ ಸಾಲಿನಲ್ಲಿ 83,200 ಕೋಟಿ ರೂ.ಗಳಿಗೆ ಹೆಚ್ಚಳವಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 47 3 ರಷ್ಟು ಹೆಚ್ಚಳವನ್ನು ಕಂಡಿದೆ.

2024-25ನೇ ಸಾಲಿನಲ್ಲಿ ಸರ್ಕಾರವು ಒಟ್ಟು [illegible] ಕೋಟಿ ರೂ.ಗಳನ್ನು ಬದ್ಧ ವೆಚ್ಚಗಳು ಸೇರಿದಂತೆ ಹಲವು ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಬಂಡವಾಳ ಯೋಜನೆಗಳಿಗೆ ವಿನಿಯೋಗಿಸಿರುತ್ತದೆ. ಗ್ಯಾರಂಟಿ ಯೋಜನೆಗಳಿಗೆ ಒಟ್ಟು 52,526 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿರುತ್ತದೆ ಹಾಗು ಬಂಡವಾಳ ಯೋಜನೆಗಳಿಗೆ 64,537 ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿರುತ್ತದೆ. ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಮಾತ್ರವಲ್ಲದೆ ಅಭಿವೃದ್ಧಿ ಯೋಜನೆಗಳಿಗೂ ಪ್ರಧಾನ್ಯತೆ ನೀಡಿರುವುದನ್ನು ಇದು ಸ್ಪಷ್ಟ ಪಡಿಸುತ್ತದೆ

**ಸಂಖ್ಯೆ: ಆಇ 162 ಬಿಜಿಎಲ್ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ